‘ಸ್ವಲ್ಪ ತಲೆ ನೋವು, ಮಲಗಿರ್ತೀನಿ. ಕಾಲ್ ಮಾಡ್ಬೇಡ’ ಎಂದು ಮೆಸೇಜ್ ಕಳಿಸಿ, ಮಲಗಿದೆ. ವಸು ಹೇಳಿದ ಮಾತುಗಳೇ ರಿವೈಂಡ್ ಆಗಿ ಆಗಿ ನಿಂತ ನೀರಲ್ಲಿ ಕಲ್ಲು ಬಿದ್ದ ಹಾಗಾಗಿತ್ತು.

***

ಸುಮಾರು ಆರು ಗಂಟೆಯಾಗಿರಬೇಕು, ಕಾಲಿಂಗ್ ಬೆಲ್ ಆಯ್ತು. ಎದ್ದು ಪೀಪ್ ಹೋಲ್‌ನಿಂದ ಇಣುಕಿದರೆ, ಅವಿ.. ಅವಿನಾಶ್ ನಿಂತಿದ್ದ. ಕೋಪದಲ್ಲೇ ಬಾಗಿಲು ತೆರೆದೆ.

‘ನಿನ್ ಹತ್ರ ಕೀ ಇತ್ತಲ್ವಾ? ಮತ್ಯಾಕ್ ಬೆಲ್ ಮಾಡ್ದೆ?’ ಕೋಪದಲ್ಲಿ ಕೂಗಿದ್ದೆ.

‘ಇತ್ತು, ಹೆಂಡ್ತಿನೇ ಬಂದು ಬಾಗ್ಲು ತೆಗಿಲಿ ಅಂತ’ ಎಂದು ಫ್ರೆಶ್ ಆಗೋಕೆ ಹೋದ. ಕೋಪ ನೆತ್ತಿಗೇರಿತ್ತು.

‘ಯಾಕ್ ಮನು, ಕಾಫಿ ಮಾಡಿಲ್ವಾ?’ ಫ್ರೆಶ್ ಆಗಿ ಬಂದವನೇ ಪ್ರಶ್ನೆ ಎಸೆದ.

‘ಇಲ್ಲ, ನಂಗ್ ಸುಸ್ತಾಗಿದೆ, ನೀನೇ ಮಾಡ್ಕೊ’

‘ನಾನಾ? ವ್ಹಾಟ್ ನಾನ್ ಸೆನ್ಸ್ ಯು ಆರ್ ಸ್ಪೀಕಿಂಗ್? ಆಫೀಸಿಂದ ಸುಸ್ತಾಗ್ ಬಂದಿದೀನಿ ಅನ್ನೋ ಕರ್ಟಸಿ ಬೇಡ್ವಾ?’

‘ಅಯ್ಯೋ, ನಂಗೂ ಸುಸ್ತಾಗಿದೆ. ನಾನೂ ಮನುಷ್ಯಳೇ’

‘ಸೋ ವ್ಹಾಟ್?! ನೀ ಮನೇಲೇ ಇರ್ತೀಯಾ ತಾನೇ? ನಾನ್ ಆಫೀಸ್‌ಗೆ ಹೋಗ್ ಬಂದಿರ್ತೀನಿ. ನಾನೇ ಎಲ್ಲ ಮಾಡ್ಕೊಳೋದ್ ಆಗಿದ್ರೆ ನಾ ನಿನ್ ಯಾಕ್ ಮದ್ವೆ ಆಗ್ತಿದ್ದೆ?’

‘ಏನಂದೆ? ಯು ಮೀನ್ ನೀನ್ ನನ್ನ ಮದ್ವೆ ಆಗಿದ್ದು ಕೆಲ್ಸ ಮಾಡೊಕ್ ಜನ ಇಲ್ಲ ಅಂತಾನಾ? ಹಾಗಾದ್ರೆ ಕೆಲ್ಸದವ್ರನ್ ಇಟ್ಕೊಬೇಕಿತ್ತು’.

....


...‘ಮಾನ್ವಿ, ಯು ಆರ್ ಟಾಕಿಂಗ್ ಟೂ ಮಚ್! ಹೆಂಡ್ತಿ ಅಂದ್ಮೇಲೆ ರೆಸ್ಪಾನ್ಸಿಬಿಲಿಟಿ ಇರತ್ತೆ ತಾನೇ?’

‘ಗಂಡಂಗ್ ಇರಲ್ವಾ?’

‘ಕಮಾನ್ ಮಾನ್ವಿ, ಯಾಕ್ ನಿನ್ ಫ್ರೆಂಡ್ ವಸು ಥರ ಆಡ್ತಿದಿಯಾ? ಅವ್ಳಿಗ್ ಸಂಬಂಧದ್ ಬೆಲೆ ಗೊತ್ತಿಲ್ಲ.. ಅವ್ಳ...’

‘ಶಟಪ್ ಅವಿನಾಶ್! ಅವ್ಳ ಬಗ್ಗೆ ಮಾತಾಡ್ಬೇಡ. ಅವ್ಳು ಹೇಳಿದ್ರಲ್ಲಿ ತಪ್ಪೇನಿಲ್ಲ. ನೀವ್ ಗಂಡಸರೆಲ್ಲ ಒಂದೇ. ಇಗೋ ಬ್ಲಡ್ಡಲ್ಲೇ ಬಂದಿರತ್ತೆ. ನಿಮ್ ಫ್ಯಾಮಿಲಿಲಿ ಪಿತ್ರಾರ್ಜಿತ ಅಂತ ಬೇರೆ ಏನ್ ಕೊಟ್ಟಿರ್ತಾರೋ ಇಲ್ವೋ. ಇಗೋನ್ ಮಾತ್ರ ಧಾರೆ ಎರ್ದ್ ಕಳ್ಸಿರ್ತಾರೆ’

‘ಸೀರಿಯಸ್ಲಿ ಮಾನ್ವಿತಾ, ನೀನ್ ಥೇಟ್ ವಸುಂಧರಾ ಥರ ಆಡ್ತಿದಿಯಾ. ಒಂದ್ ಕಾಫಿಗೆ ಇಷ್ಟ್ ಮಾತ್ ಬೇಕಿತ್ತಾ?’ ಎಂದ ಅವಿನಾಶ್ ಟೀವಿ ಆನ್ ಮಾಡಿಕೊಂಡು ಮೊಬೈಲ್ ನೋಡುತ್ತ ಕೂತ.



‘ಒಂದು ಕಾಫಿಗ್ ಅಲ್ಲ. ಪ್ರೀತಿ ಅನ್ನೊ ಹೆಸ್ರಲ್ಲಿ ನೀ ನನ್ನ ಇಂಡೈರೆಕ್ಟ್ ಆಗಿ ರೂಲ್ ಮಾಡ್ತಿದಿಯಾ. ನೋಡು, ನೋಡು, ನಾನ್ ಇಷ್ಟ್ ಮಾತಾಡ್ತಾ ಇದ್ರೂ ಹೇಗ್ ಫೋನ್ ನೋಡ್ಕೊಂಡ್ ಕೂತಿದೀಯಾ. ನನ್ನಿಂತ ಇಂಪಾರ್ಟೆಂಟ್ ಏನಿದೆ ಅದ್ರಲ್ಲಿ? ಕೊಡು ನೋಡೋಣ....’ ಎಂದು ಕೈಚಾಚಿದೆ. ಅವಿನಾಶ್ ಮುಖದಲ್ಲಿ ಗಾಬರಿ ಎದ್ದು ಕಾಣಿಸ್ತಿತ್ತು.

‘ನನ್ ಫೋನ್ ನಿಂಗ್ಯಾಕೆ? ಏನ್ ಕಿಸಿತೀಯಾ ಅದ್ರಲ್ಲಿ?’

‘ಅವೆಲ್ಲ ನಿಂಗ್ ಬೇಕಾಗಿಲ್ಲ. ಕೊಡು ಅಂದೆ ತಾನೇ? ಕೊಡು ಅಷ್ಟೆ’ ಎಂದು ಅನಾಮತ್ತಾಗಿ ಅವ್ನ ಕೈಲಿದ್ದ ಮೊಬೈಲ್‌ಗೆ ಕೈಹಾಕಿದೆ. ಅಷ್ಟೇ ಕೋಪದಿಂದ ಅವಿ ನನ್ನನ್ನು ತಡೆದ. ಅವಮಾನವಾದಂತಾಗಿ ಮುಖ ಕೆಂಪಾಗಿತ್ತು.

‘ನನ್ ಹತ್ರ ಯಾವ್ ಗುಟ್ಟೂ ಮಾಡಲ್ಲ ಅಂತ ಪ್ರಾಮಿಸ್ ಮಾಡಿದ್ಯಲ್ಲ, ಈಗ ಫೋನ್ ಕೊಡೋಕ್ ಯಾಕ್ ಭಯ? ನಿನ್ ಸೀಕ್ರೇಟ್ಸ್ ಎಲ್ಲಾ ಗೊತ್ತಾಗ್ಬಿಡತ್ತೆ ಅಂತಾನಾ?’

‘ಏನ್ ಬೇಕಾದ್ರೂ ಅಂದ್ಕೋ, ಫೋನ್ ಮಾತ್ರ ಕೊಡಲ್ಲ. ನೀನ್ ಇದೇ ಥರ ಆಡ್ತಿದ್ರೆ ನಾನ್ ಕೆಟ್ಟೋನಾಗ್ಬೇಕಾಗತ್ತೆ...’ ಎನ್ನುತ್ತಿದ್ದಂತೆಯೇ ಅವಿಯ ಫೋನ್ ರಿಂಗಾಗಿತ್ತು. ತಕ್ಷಣ ಫೋನ್ ಎತ್ತಿಕೊಂಡು ಬಾಲ್ಕನಿಗೆ ಓಡಿದ. ಯಾಕೋ ವಸು ಹೇಳಿದ ಮಾತೆಲ್ಲ ಮನಸ್ಸಲ್ಲಿ ಮತ್ತೊಮ್ಮೆ ಗಿರಕಿ ಹಾಕಿತ್ತು. ಬದುಕು ಭಾರ ಅಂತ ಮೊದಲ ಬಾರಿಗೆ ಅನ್ನಿಸ್ತು. ಇಡೀ ದೇಹ ಶಕ್ತಿ ಕಳೆದುಕೊಂಡಂತಾಗಿ ಕಾಲೆಳೆದುಕೊಂಡು ರೂಮಿಗೆ ಬಂದೆ. ಅಡುಗೆ ಮಾಡುವುದಕ್ಕೂ ಮನಸ್ಸಾಗದೆ ದಿಂಬಿಗೊರಗಿದೆ.

‘ಹೆಂಡ್ತಿಯನ್ನ ರೂಲ್ ಮಾಡೋ, ಡಾಮಿನೇಟ್ ಮಾಡೋ, ಮೋಸ ಮಾಡೋ, ಇಗೋಯಿಸ್ಟಿಕ್ ಗಂಡಂಗೆ ಅಡುಗೆ ಮಾಡ್ ಹಾಕೋ ದರ್ದು ನಂಗಿಲ್ಲ. ಬೇಕಾದ್ರೆ ಅಷ್ಟೇ ಮಾಡ್ಕೊಳ್ಳಲಿ’ ಎಂದುಕೊಂಡು ಮಲಗಿದೆ.

***

ಕೆಲ ಹೊತ್ತು ಆಗಿರಬೇಕು. ಯಾರೋ ತಲೆಸವರಿದಂತಾಗಿ ಕಣ್ಣು ಬಿಟ್ಟೆ. ಅವಿ ನಿಂತಿದ್ದ, ಅದೂ ಫಾರ್ಮಲ್ಸ್‌ನಲ್ಲಿ!

‘ಅವಿ... ನೀನು.... ಈ... ಈಗ್ ಬಂದ್ಯಾ?’

‘ಹುಂ, ನೀ ತಲೆನೋವು ಅಂದ್ಯಲ್ಲ, ಸೋ ಬೇಗ ಬಂದೆ. ಹೇಗಿದೀಯಾ ಕಂದ...?’ ಎಂದು ಮುತ್ತಿಟ್ಟ. ತಲೆಕೊಡವಿಕೊಂಡು ಮತ್ತೊಮ್ಮೆ ಅವನನ್ನು ನೋಡಿದೆ.

‘ನೀ ಹೇಗ್ ಬಂದೆ? ಬೆಲ್ ಮಾಡಿದ್ಯಾ?’

‘ಯಾಕೇ? ವಿಚಿತ್ರವಾಗಿ ಕೇಳ್ತಿದಿಯಾ? ನಿಂಗ್ಯಾಕ್ ಡಿಸ್ಟರ್ಬ್ ಮಾಡ್ಲಿ? ಕೀ ಇತ್ತಲ್ಲ, ತಕ್ಕೊಂಡ್ ಬಂದೆ’ ಎಂದು ವಾಚ್ ಬಿಚ್ಚಿಡುತ್ತಿದ್ದ ಅವನನ್ನೇ ನೋಡಿದೆ. ವಸು ಹೇಳಿದ್ದೆಲ್ಲ ನೆನಪಿಸಿಕೊಂಡೆ. ಈ ಇಗೋ, ಅಪ್ರಾಮಾಣಿಕತೆ, ಮೋಸಗಳೆಲ್ಲ ಇವ್ನಿಗೆ ಯಾವ್ ಆಂಗಲ್‌ನಿಂದಾನೂ ಸೂಟ್ ಆಗಲ್ಲ ಅನ್ನಿಸ್ತು.

‘ದರಿದ್ರ ಕನಸು’ ಎಂದು ಗೊಣಗಿದೆ.

‘ಏನಾದ್ರೂ ಅಂದ್ಯಾ?’ ಅವಿ ಕೇಳಿದ.

‘ಇಲ್ಲಪ್ಪ... ನಿಂಗ್ ಕಾಫಿ ಮಾಡ್ಲಾ?’ ಅಂದೆ.

‘ಏನೂ ಬೇಡ, ನಿಂಗೇನೋ ಕೆಟ್ ಕನಸು ಬಿದ್ದಿರ್ಬೇಕು, ಹೋಗಿ ಫ್ರೆಶ್ ಆಗಿ ಬರ್ತೀನಿ. ಇವತ್ತು ನಮ್ ಹುಡ್ಗಿಗೆ ನನ್ ಕೈಯಾರೆ ಕಾಫಿ ಮಾಡ್ತೀನಿ...’ ಎಂದು ಬಾತ್‌ರೂಮಿಗೆ ಹೋದ.

ಎದ್ದು ಹಾಲ್‌ಗೆ ಬಂದು ಟೀವಿ ಆನ್ ಮಾಡಿ ಕೂತೆ.

‘ಬಿಸಿ ಬಿಸಿ ಕಾಫಿ ರೆಡಿ...’ ಎನ್ನುತ್ತ ನನ್ನ ಮುಂದೆ ಮಂಡಿಯೂರಿ ಕೂತಿದ್ದ ಅವಿಯನ್ನೇ ನೋಡುತ್ತ ಕೂತೆ. ಯಾಕೋ ನನ್ನ ಬಗ್ಗೆಯೇ ಅಸಹ್ಯ ಅನ್ನಿಸ್ತು.

‘ನಿಂಗ್ ಸಿಕ್ಕಿರೋನು ಅಪರಂಜಿ ಕಣೆ. ಯಾರದ್ದೋ ಮಾತ್ ಕೇಳಿ ಅವ್ನ ದೂರ ಮಾಡ್ಕೊಬೇಡ’ ಅಂತ ಮನಸ್ಸು ಎಚ್ಚರಿಕೆ ನೀಡಿತ್ತು.

‘ಹಾಂ, ಮನು, ಹೇಳೋಕ್ ಮರ್ತೆ ರಾತ್ರಿ ಊಟಕ್ಕೆ ರೋಟಿ, ಕರಿ ಪಾರ್ಸೆಲ್ ತಂದಿದೀನಿ. ಏನೂ ಮಾಡಕ್ ಹೋಗ್ಬೇಡ’ ಎಂದು ಪಾರ್ಸೆಲ್ ಎತ್ತಿಡುತ್ತಿದ್ದ ಮನುವನ್ನು ಹೆಚ್ಚು ಹೊತ್ತು ನೋಡುವುದಕ್ಕೂ ಸಾಧ್ಯವಾಗದೆ ಕಣ್ಣಲ್ಲಿ ನೀರು ತುಂಬಿತ್ತು. ಭೂತಕನ್ನಡಿ ಹಿಡಿದು ಹುಡುಕಿದರೂ ಇವನ ಮುಖದಲ್ಲಿ ಮೋಸ, ವಂಚನೆಯ ಭಾವ ಕಾಣಲಾರದು ಎಂದುಕೊಂಡೆ.

ಟೀವಿಯಲ್ಲಿ ಡಿವಿಜಿಯವರ ಅದೇ ಸಾಲು ಅನುರಣಿಸುತ್ತಿತ್ತು...

‘ಇರುವ ಭಾಗ್ಯವ ನೆನೆದು ಬಾರನೆಂಬುದ ಬಿಡು, ಹರುಷಕ್ಕಿದೆ ದಾರಿ...’

ಪ್ರತಿಕ್ರಿಯಿಸಿ: **feedback@sudha.co.in**

